ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 167-172
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಶಾಕ್ತ ಮತ್ತು ಕೌಳರು

**ಡಾ. ಶ್ರೀಧರಮೂರ್ತಿ ಕೆ. ಯು**
ಕನ್ನಡ ಉಪನ್ಯಾಸಕರು, ಮಂದಾರ ಸ್ವತಂತ್ರ ಪದವಿ ಪೂರ್ವ ಕಾಲೇಜು, ನೀಲಾನಹಳ್ಳಿ, ದೊಡ್ಡಬಾತಿ, ದಾವಣಗೆರೆ

**Abstract:**
*ದೇಹವನ್ನು ಸಕಲ ಸಾಧನೆಗೆ ಆಧಾರವೆಂದು ತಿಳಿದು ಹಠಯೋಗ ಸಿದ್ಧಿಯಿಂದ ಇಂದ್ರಿಯ ನಿಗ್ರಹ ಚಿತ್ತಶುದ್ಧಿಗಳನ್ನು ಸಾಧಿಸಿ ಆ ಮೂಲಕ ಆನಂದವನ್ನು ಪಡೆಯುವುದೇ ಪರಮಗುರಿ ಎಂಬ ನಂಬಿಕೆಯಿಂದ ತಾಂತ್ರಿಕ ಆಚರಣಾ ಪಂಥಗಳು ಹುಟ್ಟಿಕೊಂಡವು. ಕ್ರಿ.ಶಕದ ಆರಂಭದ ಹೊತ್ತಿಗೆ ಕಾಣಿಸಿಕೊಳ್ಳತೊಡಗಿದ ಈ ತಾಂತ್ರಿಕ ಆಚರಣೆಗಳು ಬೌದ್ಧ, ಜೈನ, ಕಾಪಾಲಿಕ, ಕೌಳ ಎಲ್ಲರನ್ನೂ ತನ್ನತ್ತ ಸೆಳೆದವು. ಕ್ರಿ.ಶ. 6ನೆಯ ಶತಮಾನದಿಂದ 10ನೆಯ ಶತಮಾನದವರೆಗೆ ಪ್ರಬಲವಾಗಿ ಬೆಳೆಯ ತೊಡಗಿದ ಈ ತಂತ್ರ ಸಾಧನೆಯು ವೈದಿಕ ಆಚರಣೆಗಳ ವಿರುದ್ಧವಾಗಿ ಬೆಳೆಯತೊಡಗಿದವು.*

**Keywords:** *ತಾಂತ್ರಿಕ ಆಚರಣಾ ಪಂಥ, ಜೈನಮುನಿಗಳು, ಹಠಯೋಗ, ಇಂದ್ರಿಯ ನಿಗ್ರಹ, ಶಾಕ್ತ, ಕೌಳ, ಕಾಳಾಮುಖ*

**ಪೀಠಿಕೆ**

ಜೈನ ಯಾಪನೀಯ ಸಂಘದ ಮುನಿಗಳು, ಕಾಳಾಮುಖ ಮುನಿಗಳು ಮಂತ್ರ ತಂತ್ರಗಳ ಸಿದ್ಧಿಗಳನ್ನು ಪಡೆದದನ್ನು ಶಾಸನಗಳು ತಿಳಿಸುತ್ತವೆ. ಆದರೂ ಜೈನರು, ವೈದಿಕರು, ವೀರಶೈವರು ವಾಮಾಚಾರದ ತಾಂತ್ರಿಕ ಪಂಥಗಳನ್ನು ಹಿಂಸಕವಾದ ಆರಾಧನಾ ವಿಧಾನವೆಂದು ತೀವ್ರವಾಗಿ ವಿಡಂಬಿಸಿದರು ಮತ್ತು ತಿರಸ್ಕರಿಸಿದರು. ಅಲ್ಲದೆ ಈ ವಿರೋಧದ ಹಿಂದೆ ಕೇವಲ ಉಗ್ರ ಆಚರಣೆ ಅತಿಮಾರ್ಗವಷ್ಟೇ ಕಾರಣವಾಗಿರಲಿಲ್ಲ. ಅದು ಸ್ಥಾಪಿತ ವರ್ಗಗಳ ವ್ಯವಸ್ಥೆಯನ್ನು ಬುಡಮೇಲು ಮಾಡುವ ಅಸ್ತ್ರವನ್ನು ತನ್ನೊಳಗೆ ಇಟ್ಟುಕೊಂಡಿತ್ತು. ಅವುಗಳಿಗೆ ಪ್ರಭುತ್ವದ ಹಾಗೂ ವೇದ, ಶಾಸ್ತ್ರ, ಪುರಾಣ ಇತ್ಯಾದಿ ಕಟ್ಟುಪಾಡುಗಳಿರಲಿಲ್ಲ ಎಂಬುದು ಮುಖ್ಯ ಕಾರಣವಾಗುತ್ತದೆ. ಭೌತವಾದಿ ನೆಲೆಯಲ್ಲಿ ಹುಟ್ಟಿಕೊಂಡ ಈ ಪಂಥಗಳು ವೈದಿಕ ಪಥ್ಯಗಳನ್ನು ವರ್ಣಾಶ್ರಮ ಇತ್ಯಾದಿಗಳನ್ನು ಪಾಪ–ಪುಣ್ಯ, ಪವಿತ್ರ–ಅಪವಿತ್ರ ಮುಂತಾದ ಪರಿಕಲ್ಪನೆಗಳನ್ನು ವಿರೋಧಿಸಿದ್ದವು. ಆ ಕಾರಣದಿಂದಲೇ ಸಾಮಾನ್ಯ ಸಮುದಾಯವನ್ನು ತನ್ನತ್ತ ಸೆಳೆದುಕೊಳ್ಳುತ್ತಿದ್ದವು. ಆ ಕಾರಣಕ್ಕಾಗಿಯೇ ಇಂತಹ ಪಂಥಗಳನ್ನು 'ವಾಮ'ಚಾರ ವೆಂದು ಧರ್ಮ ಬಾಹಿರವೆಂದು ಆರೋಪಿಸಿ ಮುರಿಯುವ ಪ್ರಯತ್ನ ಮಾಡಲಾಯಿತು.

ಶೈವಶಾಕ್ತ ತಾಂತ್ರಿಕ ಪಂಥಗಳಾದ ಕಾಪಾಲಿಕ ಹಾಗೂ ಕೌಳರಿಗೆ ಶಾಕ್ತ ಪರಂಪರೆ ಸೇರಿವೆ. ಇವರಿಗೆ ಸಂಬಂಧಿಸಿದಂತೆ ಗ್ರಂಥಾಧಾರಗಳು ಕಂಡುಬರುತ್ತವೆ. ಆದರೆ ಶಾಸನಗಳು ಅತಿ ವಿರಳವೆಂದೆ ಹೇಳಬಹುದು. ಇದಕ್ಕೆ ಮೂಲಕಾರಣವೆಂದರೆ ಇವರು ಎಂದೂ ಸಿರಿವಂತ ಸಾಮಾಜಿಕರು ಮತ್ತು ಪ್ರಭುತ್ವದ ಹಂಗಿಗೆ

**Please cite this article as:** ಶ್ರೀಧರಮೂರ್ತಿ ಕೆ. ಯು. (2024). ಶಾಕ್ತ ಮತ್ತು ಕೌಳರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(4), 167–172

ಬಿದ್ದವರಲ್ಲವೆಂಬುದು ಸ್ಪಷ್ಟವಾಗುತ್ತದೆ. ಸಾಂಸ್ಥಿಕವಾಗಿ ನೆಲೆನಿಂತು ದಾನ ದತ್ತಿಗಳನ್ನು ವಿಶೇಷವಾಗಿ ಪಡೆದು ಧರ್ಮ ಪ್ರಚಾರ ಮಾಡುವ ಒತ್ತಡಕ್ಕೆ ಅವರು ಒಳಗಾಗಿದ್ದರೆನಿಸುವುದಿಲ್ಲ. ಏಕಾಂತ ಪ್ರಿಯರಾಗಿ ಗೋಪ್ಯವಾಗಿ ತಮ್ಮ ಸಾಧನೆ ಸ್ಥಿತಿಗಳಲ್ಲಿ ತೊಡಗುತ್ತಿದ್ದ ಇವರು ಗಿರಿ ಕಣಿವೆ ಕಾಡುಗಳನ್ನು ಸ್ಮಶಾನಗಳನ್ನು ತಮ್ಮ ನೆಲೆಯನ್ನಾಗಿ ಮಾಡಿಕೊಂಡು ಬದುಕುತ್ತಿದ್ದರು.

ಮಾತೃ ಪ್ರಧಾನ ಸಂಸ್ಕೃತಿಯ ಆದಿಮ ಆಚರಣೆಗಳು ಮುಂದೆ ಶಾಕ್ತ ಪಂಥವಾಗಿ ಬೆಳೆಯಿತ್ತೆನ್ನಬಹುದು. ಸ್ತ್ರೀ ಮತ್ತು ಪ್ರಕೃತಿಯ ಸೃಷ್ಟಿ ಶಕ್ತಿಯೇ ಇಡೀ ಜಗತ್ತಿನ ಮೂಲವೆಂಬ ಕಾರಣಕ್ಕೆ ಆರಾಧನೆಗೊಳ್ಳ ತೊಡಗಿದವು. ಈ ಸೃಷ್ಟಿ ಶಕ್ತಿಯ ದೇವಿಯ ರೂಪವೆ ಶಕ್ತಿಯಾಗಿದೆ. ಇವಳನ್ನು ಆರಾಧಿಸುವ ಪಂಥವೆ ಶಾಕ್ತವೆಂದು ಹೇಳಬಹುದು. ಇದರಲ್ಲಿ ಪ್ರಮುಖವಾಗಿ ಈ ಕೌಳರು ಈ ದೇವಿಯ ಆರಾಧಕರಾಗಿರುತ್ತಾರೆ. ಈ ಕೌಳರನ್ನು ನಿದ್ರೆಯಲ್ಲಿರುವ ಕುಂಡಲಿನಿಯಲ್ಲಿರುವ ಕೌಲಿನೀ ಶಕ್ತಿಯನ್ನು ಆರಾಧಿಸುವವರಾಗಿದ್ದಾರೆ. ಇವರು ಅತಿಮಾರ್ಗಿಕ ತಾಂತ್ರಿಕರಾಗಿದ್ದರು. ಕೌಳ ಸಿದ್ಧಾಂತದ ಮೂಲ ಪ್ರವರ್ತಕ ಪಾಶುಪತ ಗುರುವಾದ ವಿಶ್ವರೂಪನ ಶಿಷ್ಯ 'ಅಲ್ಲಟ ಅಥವಾ ಭಾವರಕ್ತ'. "ರಾಜಶೇಖರನ 10ನೆಯ ಶತಮಾನದಲ್ಲಿ ರಚಿತವಾದ ಕರ್ಪೂರ ಮಂಜುರಿಯಲ್ಲಿ ಭೈರವಾನಂದನೆಂಬ ಮಂತ್ರವಾದಿ ತಾನು ಕೌಳನೆಂದೂ, ಅಲ್ಲದೆ ಮದ್ಯಪಾನ ಮತ್ತು ಸ್ತ್ರೀಸಂಗಗಳನ್ನು ತಾನು ಮಾಡುವುದಾಗಿಯೂ ಹೇಳಿಕೊಂಡಿದ್ದಾನೆ."[1] ಕರ್ನಾಟಕದಲ್ಲಿ ಇವರು ಇದ್ದ ಬಗ್ಗೆ 'ಸಮಯ ಪರೀಕ್ಷೆ' ಮತ್ತು 'ಯಶಸ್ತಿಲಕ' ಚಂಪೂಗಳಲ್ಲಿ ಬರುವ ಉಕ್ತಿಗಳು ಸಾಕ್ಷ್ಯಾಧಾರವನ್ನು ಒದಗಿಸುತ್ತವೆ.

*"ಏಕ್ಕಲದೇವಿ(ಗಮಾ)ಮಾ*
*ಲಕ್ಕನಿಂಗ ಬನದ ಬಳರಿಗಮ ಮೈಲಾರಂ*
*ಗಳ್ಕದೆ ಜಾತ್ರೆಯ ಮಾಟಿಂ*
*ಮೊಕ್ಕಳಿಗಂ ಜೈನನಲ್ಲನಾತಂ ಕೌಳಂ"*[2]

ಬ್ರಹ್ಮ ಶಿವನ ಸಮಯ ಪರೀಕ್ಷೆಯಲ್ಲಿನ ಈ ಪದ್ಯದಲ್ಲಿ ಏಕ್ಕಲ ದೇವಿಗೆ ಆ ಏಕ್ಕನಿಗೂ, ಬನದ ಬಳರಿಗೂ, ಮೈಲಾರಗಳಿಗೂ ಅಳುಕದೆ, ಭಯಪಡೆದೆ, ಜಾತ್ರೆ ಮಾಡುವ ಒಕ್ಕಳಿಗೂ ಜೈನನಲ್ಲ ಆತ 'ಕೌಳ' ಎಂದು ಹೇಳಿದ್ದಾನೆ. ಬ್ರಹ್ಮಶಿವನು ಕೌಳರನ್ನು "ಆರ್ಪನಿತಂ ಸೇವಿಸಿಯುಂ ದರ್ಪಾಂಧತರಾಗಿ ಬಸನಮಂ ಪಾಳಿಸಿಯುಂ ಕೂರ್ಪುವೆರಸಿರ್ಪ್ಪರೆ ಸನ್ಮಾರ್ಗದಣದಮಂ ಜೈನರವೋಲ್"[3] ಎಂದು ದೂಷಿಸುತ್ತ ಹೇಳಿದ್ದಾನೆ. ಕೌಳರ ಮದ್ಯ-ಮಾಂಸ ಮೋಹವನ್ನು ಕವಿ ವಿಂಡಬನೆಯ ಮೂಲಕ ಹೇಳಿದ್ದಾನೆ. ಕೌಳರು ಕಡ್ಡಾಯವಾಗಿ ಮಾನವ ಬಲಿಯನ್ನು ಕೊಡುತ್ತಿದ್ದರೆಂದು ಹೇಳಲು ಬರುವುದಿಲ್ಲ. ಆದರೆ ಕೌಲಾಚಾರ್ಯನ ಸೂಚನೆ ಮೇರೆಗೆ ಮಾರದತ್ತನು ಮಹಾ ಭೈರವ ದೇವಾಲಯದಲ್ಲಿ ಮಾನವ ಬಲಿಗಾಗಿ ಸಿದ್ಧತೆ ಮಾಡುವ ವಿಷಯವು ಯಶಸ್ತಿಲಕ ಕೃತಿಯಲ್ಲಿ ಕಂಡುಬಂದಿದೆ. 'ಶಂಕರ ದಾಸಿಮಯ್ಯನ ಪುರಾಣ'ದಲ್ಲಿ ಕೌಳರಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು ದೊರೆಯುತ್ತವೆ. ಆಚರಣೆಗಳ ಸಾದೃಶ್ಯದ ಮೇಲೆ ಕಾಪಾಲಿಕರೂ ಕೌಳರೂ ಬಹುಮಟ್ಟಿಗೆ ಒಂದೇ ಎಂದು ಹೇಳಬಹುದು. ಸುಮಾರು ಹನ್ನೆರಡನೆಯ ಶತಮಾನದಲ್ಲಿ ರಚಿತವಾದ ಜೈನ ಕೃತಿಕಾರ ಯಶಪಾಲನ 'ಮಹಾರಾಜಪರಾಜಯ' ಎಂಬ ನಾಟಕದಲ್ಲಿ ಕೌಳರ ಬಗ್ಗೆ ವಿವರಗಳು ದೊರೆಯುತ್ತವೆ.

ಈ ನಾಟಕದಲ್ಲಿ ಕೌಳನೊಬ್ಬ "ಪ್ರತಿನಿತ್ಯವೂ ಮಾಂಸ ತಿಂದು ಮದ್ಯವನ್ನು ಯಥೇಚ್ಛವಾಗಿ ಕುಡಿಯಬೇಕೆಂಬ ಧರ್ಮವನ್ನು ತಾನು ಬೋಧಿಸುವುದಾಗಿ ಹೇಳುತ್ತ ಮುಕ್ತವಾಗಿ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಬೇಕೆಂದು ಘೋಷಿಸುತ್ತಾನೆ."[4] ಕೌಳರ ಶಕ್ತಿಯ ಮೂಲಧಾರವು ಶ್ರೀಚಕ್ರದಲ್ಲಿರುತ್ತದೆ. ಈ ಚಕ್ರವನ್ನು ಕುಲಚಕ್ರ ಎಂದು ಕರೆಯುತ್ತಾರೆ. "ಸಮಯಚಾರಿಗಳು ಚಿತ್ನ ಸ್ಥೂಲ ರೂಪವಾಗಿ ಕುಂಡಲಿನೀ ಶಕ್ತಿಯನ್ನು ಉಪಾಸನೆ,

ತಪ್ಪಸ್ಸು, ಮಂತ್ರಜಪ ಮುಂತಾದವುಗಳಿಂದ ಹಂತಹಂತವಾಗಿ ಎಚ್ಚರಗೊಳಿಸಿ ಶಕ್ತಿ ಕೇಂದ್ರಗಳಾಗಿರುವ ಮಾನವನ ದೇಹದಲ್ಲಿರುವ ಷಟ್‌ಚಕ್ರಗಳ ಮೂಲಕ ಅದನ್ನು ಮೇಲೇರಿಸುತ್ತಾ ಸಹಸ್ರಾರ ಚಕ್ರಕ್ಕೆ ಸತ್ ಮತ್ತು ಚಿತ್‌ಗಳನ್ನು ತಂದು, ಜೀವಾತ್ಮ ಮತ್ತು ಪರಮಾತ್ಮರನ್ನು ಐಕ್ಯಗೊಳಿಸುತ್ತಾರೆ. ಈ ಪೂಜೆಯು ಸಂಪೂರ್ಣವಾಗಿ ಆಂತರಿಕವಾಗಿದ್ದು, ಕೌಲ ಮಾರ್ಗಿಗಳು ಕುಂಡಲಿನಿಯನ್ನು ನಿದ್ರೆಯಿಂದ ಎಚ್ಚರಗೊಳಿಸಲು ಪ್ರಯತ್ನಿಸುತ್ತಾರೆ. ಭೌತ ಮತು ಪ್ರಾಕೃತಿಕ ವಸ್ತುಗಳಿಂದ ಲಭಿಸುವ ಸುಖವನ್ನು ಅನುಭವಿಸುತ್ತಾ, ಅದೇ ಸಮಯದಲ್ಲಿ ಕುಂಡಲಿನಿಯ ಜಾಗೃತಗೊಳಿಸುವುದರಿಂದ ಮುಕ್ತಿಯನ್ನ ಪಡೆಯಬಹುದು ಎಂದು ನಂಬಿದ್ದಾರೆ. ಈ ರೀತಿಯ ಪೂಜೆಯು ಸಂಪೂರ್ಣವಾಗಿ ಬಾಹ್ಯವಾದದ್ದು. ಕೆಲವು ಶಾಕ್ತೋಪಾಸಕರು ಬಹಿರಂಗ ಪೂಜೆಗೆ ಮುಖ್ಯಸ್ಥಾನವನ್ನು ಕಲ್ಪಿಸಿದ್ದರೂ, ಚಿನ್ನ ಅಥವಾ ಬೆಳ್ಳಿ ಲೋಹಗಳಿಂದ ತಯಾರಿಸಿರುವ ಯಂತ್ರಗಳಿಂದ ಉಪಾಸನೆಯನ್ನು ಆಚರಿಸಿ, ಕುಂಡಲಿನೀ ಶಕ್ತಿಯನ್ನು ಅನಾಹತಚಕ್ರದ (ಹೃದಯಸ್ಥಾನದ ತನಕ) ತನಕ ಏರಿಸುವುದುಂಟು. ಅವರ ಆರಾಧನೆಯ ಕ್ರಮವನ್ನು ಆಂತರಿಕ ಮತ್ತು ಬಹಿರಂಗ ಕ್ರಮಗಳ ಮಿಶ್ರಣವೆಂದು ಹೇಳಿದ್ದಾರೆ. ಸಮಯಾಚಾರ ಪದ್ಧತಿಯನ್ನು ಅತ್ಯಂತ ಸಮರ್ಥವಾಗಿ ವಿವರಿಸುವ ಶಂಕರ ಭಗವತ್ಪಾದರು ಸಮಯಾಚಾರದ ಚಂದ್ರನ ಹದಿನಾರನೆಯ ಕಲೆಯ ಪೂರ್ಣರೂಪವನ್ನು, ಅದರ ಎಲ್ಲಾ ಮಗ್ಗುಲುಗಳನ್ನು ಅತ್ಯಂತ ವಿವರಾಣಾತ್ಮಕವಾಗಿ ಸೌಂದರ್ಯ ಲಹರಿ'ಯಲ್ಲಿ ವಿವರಿಸಿದ್ದಾರೆ."[5]

ಬ್ರಹ್ಮ ಶಿವನಿಗೆ ಈ ಮತದ ಪರಿಚಯವಿದ್ದಿತ್ತು. ಆ ಕಾರಣ ಅವನು ಅದಕ್ಕೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಕೊಟ್ಟಿದ್ದಾನೆ. ಕೌಳರು ಚಂಡಿಯ ಭಕ್ತರಾಗಿದ್ದರು. ಅವರ ಪ್ರಕಾರ ಚಂಡಿಯೇ ಪರಮದೈವ. ಬ್ರಹ್ಮ, ವಿಷ್ಣು, ಶಿವರೂ ಕೂಡ ಅವಳ ಅಧೀನದಲ್ಲಿರುವ ದೈವಗಳು. ಕೌಳಚಾಯ್ಯರು ಮಾಂಸಾಹಾರ ಮದ್ಯಪಾನಗಳೇ ಮೋಕ್ಷವೆಂದು ನಂಬಿದ್ದರೆಂಬ ಸಂಗತಿಯನ್ನು ಬಹ್ಮ ಶಿವ ತೀರ ಕಟುವಾಗಿ ಖಂಡಿಸಿದ್ದಾನೆ. ಕೌಳರು ಭೋಜ್ಯ–ಅಭೋಜ್ಯ, ಪೇಯ–ಅಪೇಯವೆಂಬ ಯಾವ ವ್ಯತ್ಯಾಸವನ್ನು ಇಟ್ಟುಕೊಂಡಿರಲ್ಲವೆಂದು ಸೋಮದೇವ ಹೇಳುತ್ತಾನೆ. ಕೌಳರಲ್ಲಿ ಎರಡು ಪಂಗಡಗಳಿದ್ದವು. ಉತ್ತರ ಕೌಳರು ಮತ್ತು ಪೂರ್ವ ಕೌಳ (ಇವು ಬಹುಶಃ ಈಚಿನ ಮತ್ತು ಹಿಂದಿನ ಸಂಪ್ರದಾಯಗಳನ್ನು ಸೂಚಿಸುವಂತೆ ಕಾಣುತ್ತದೆ.) ಇಬ್ಬರೂ ಕೂಡ ತಮ್ಮ ದೇವಿಗೆ ಮದ್ಯ, ಮತ್ಸ್ಯ, ಮಾಂಸ ಮುಂತಾದವುಗಳನ್ನು ಅರ್ಪಿಸಿ ತಾವೂ ಕೂಡ ಸ್ವೀಕರಿಸುತ್ತಾರೆ. ಇವೆರಡರಲ್ಲಿ ಪೂರ್ವ ಕೌಳಕ್ಕಿಂತ ಉತ್ತರ ಕೌಳವು ಹೆಚ್ಚು ಬೀಭತ್ಸವಾಗಿದ್ದಿತ್ತು. ಕೌಳರ ಬೀಭತ್ಸವಾದ ಆಚರಣೆಗಳನ್ನು ಕುರಿತು ಚನ್ನಬಸವಣ್ಣನು ಟೀಕಿಸಿದ್ದಾನೆ. 'ಕೌಲಿ ಮರುಳಾಗಿ ಹೋದ' ಎಂದು ವಚನದಲ್ಲಿ ಹೇಳಿದ್ದಾನೆ.

"ಪೂರ್ವ ಕೌಳದ ಸಾಧಕರು ಸ್ತ್ರೀಯ ಗುಹ್ಯಾಂಗದ ಚಿತ್ರವನ್ನು ಪೂಜಿಸಿದರೆ ಉತ್ತರ ಕೌಳದ ಸಾಧಕರು ಗುಹ್ಯಾಂಗವನ್ನೇ ಪೂಜಿಸುತ್ತಿದ್ದರು. ಬ್ರಹ್ಮ ಶಿವನ ಪ್ರಕಾರ ಕರ್ಣಾಟಕದಲ್ಲಿದ್ದುದು ಈ ಉತ್ತರ ಕೌಳರಾಗಿದ್ದಾರೆ."[6]

ಪೂರ್ವ ಕೌಳರು ಮತ್ತು ಉತ್ತರ ಕೌಳರು ಈ ಇಬ್ಬರೂ ಕೂಡ ತ್ರಿಪುರ ಸುಂದರಿಯ ಆರಾಧಕರಾಗಿದ್ದಾರೆ. ಪೂರ್ವ ಕೌಳರು ಒಂಬತ್ತು ಸ್ತ್ರೀ ಯೋನಿಗಳ ಚಿತ್ರದ ಮಧ್ಯೆ ಬರೆದ ಸ್ತ್ರೀ ಯೋನಿಯ ಚಿತ್ರವನ್ನು ಸೇರಿಸಿ ಶ್ರೀಚಕ್ರವೆಂದು ಪೂಜಿಸುತ್ತಾರೆ. ಈ ಚಿತ್ರವನ್ನು ಭೂರ್ಜ ಪತ್ರದ ಮೇಲೋ, ರೇಷ್ಮೆ ವಸ್ತ್ರದ ಮೇಲೋ ಚಿನ್ನದ ತಗಡಿನ ಮೇಲೋ ಬರೆದಿರಬಹುದು. ಉತ್ತರ ಕೌಳರಾದರೊ ಸುಂದರವಾದ ಸ್ತ್ರೀ ಯೋನಿಯನ್ನು ಆರಾಧಿಸುತ್ತಾರೆ.

ಅಂಗಸಾಧನೆಯನ್ನು ಪ್ರಧಾನವಾಗಿ ಮಾಡಿಕೊಂಡ ಇವರು ದೇಹದ ಕುಂಡಲಿನೀ ಶಕ್ತಿ ಮತ್ತು ಸಹಸ್ರಾರು ಪುರುಷ(ಶಿವ) ಮಿಲನಗೊಂಡು ಪಡೆಯುವ ದೈವೀ ಆನಂದವನ್ನು ಮೋಕ್ಷವೆಂದು ಯೋಗ ಸಾಧನೆಯಲ್ಲಿ ಹೇಳಲಾಗುವುದು. ಈ

ತತ್ವವನ್ನು ಶಾಕ್ತರು ಹಾಗೂ ಕೌಳರು ಆಚರಣೆಗೆ ಇಳಿಸಿದರು. ಯೋನಿ ಚಿತ್ರ ಶಿಲ್ಪ ಅಥವಾ ಸ್ತ್ರೀಯೋನಿ ಪೂಜೆಗಳು ಇವರ ಆಚರಣೆಯಲ್ಲಿದ್ದವು. ಕೌಳರು ಪಂಚಮಕಾರಗಳೊಂದಿಗೆ ಈ ತತ್ವವನ್ನು ಲೈಂಗಿಕ ಕ್ರಿಯಾಚರಣೆಗಳಾಗಿ ರೂಢಿಸಿಕೊಂಡಿದ್ದರು. ಕೌಳ ಯೋಗಿಗಳ ಸಾಧನೆಗೆ ಯೋಗಿನಿಯರು ಸಾಧನವಾಗಿ ಬಳಕೆಗೊಂಡರು.

"ಕೌಳರು ಕರ್ನಾಟಕದಲ್ಲಿ ಇರುವುದಕ್ಕೆ ಅನೇಕ ಸಾಹಿತ್ಯ ಕೃತಿಗಳು ಇವರ ಬಗ್ಗೆ ತಿಳಿಸುತ್ತವೆ. ಎಸ್. ವಿದ್ಯಾಶಂಕರ ಅವರು, ಸೋಮರಾಜನ ಉದ್ಭಟ ಕಾವ್ಯದಲ್ಲಿ ಬರುವ ಒಂದು ತಾಂತ್ರಿಕ ಆಚರಣೆಯ ವಿವರದ ಸನ್ನಿವೇಶದ ಕಡೆಗೆ ಗಮನವನ್ನು ಸೆಳೆದಿದ್ದಾರೆ. ಕಾವ್ಯ ಭಾಗದಲ್ಲಿ 'ಚಿದಂಗ ಮುನಿಯು' ತನ್ನ ಶಿಷ್ಯ 'ಶುಕಮುನಿ'ಯ ಅಂತರಂಗವನ್ನು ಒರೆಹಚ್ಚುವ ಸಂದರ್ಭದಲ್ಲಿ, ಕವಿ ಸೋಮರಾಜನು ತನ್ನ ಸಮಕಾಲೀನ ತಾಂತ್ರಿಕ ಪಂಥವೊಂದರ ಆಚರಣೆಯನ್ನು ವಿವರವಾಗಿ ವರ್ಣಿಸಿರುವನು. ಯಾವ ತಾಂತ್ರಿಕ ಮತದ ಹೆಸರೂ ಅಲ್ಲಿ ಉಕ್ತವಾಗದಿದ್ದರೂ ಶ್ರೀಚಕ್ರದ ವರ್ಣನೆ, ಅದರ ಮಧ್ಯವಿದ್ದ ಎಳೆಯ ಪ್ರಾಯದ ಕೋಮಲಾಂಗಿಯ ವರ್ಣನೆ, ಮಧುಮಾಂಸಭರಿತ ಚಿನ್ನದ ಕಳಶಗಳು ಜವ್ವನೆಯರು ಮಧುಪಾನದಿಂದ ಮತ್ತರಾಗಿ ನರ್ತಿಸುವ ರೀತಿ ಮುಂತಾದವನ್ನು ಕವಿ ವರ್ಣಿಸಿದ್ದಾನೆ. ಕವಿ ಹೆಸರಿಸದೇ ಹೋದರೂ ಬಹುಶಃ ಅದು ಕೌಳರ ಆಚರಣೆಯನ್ನು ಹೇಳುತ್ತದೆಯೆಂದು ಸಕಾರಣವಾಗಿಯೇ ವಿದ್ಯಾಶಂಕರರು ಹೇಳಿದ್ದಾರೆ."[7]

"ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಚಿಕ್ಕೇರೂರು ಶಾಸನೋಕ್ತ ಬಳರಿಶಿಲ್ಪವು ಕ್ರಿ.ಶ. 995 ಅಹಮದಮಲ್ಲನ ಕಾಲದಲ್ಲಿ ಕೊಂಡವಣಿಗರ ಅರಸಕ್ಕ ನಿತ್ಯ ಒಂದು ಸಟ್ಟುಗ ಮಾತ್ರ ಆಹಾರವನ್ನು ಸೇವಿಸಿ ಬಳರಿ ವಿಗ್ರಹವನ್ನು ಸ್ಥಾಪಿಸಿದಳೆಂದು ಶಾಸನವು ಹೇಳುತ್ತದೆ."[8] ಇದು ಕೌಳರು ಆರಾಧನೆಯನ್ನು ಮಾಡುವ ದೇವತೆಯಾಗಿದ್ದಳು. ಈ ದೇವತೆಯು ಇಂದು ಬನಶಂಕರಿ ದೇವಿಯಾಗಿ ಪೂಜೆಗೊಳ್ಳುತ್ತಿದೆ.

ಕೌಳರ ಉಲ್ಲೇಖವು ಕ್ರಿ.ಶ. 15–16ನೇಯ ಶತಮಾನದ ಶಂಕರ ದಾಸಿಮಯ್ಯನ ಪುರಾಣದಲ್ಲಿ ಇವರ ಬಗ್ಗೆ ತಿಳಿಸುತ್ತದೆ. ಈ ಕೃತಿಯ ಪ್ರಕಾರ, ಕೌಳರು ತಾವೇ ನಿಜವಾದ ಬ್ರಾಹ್ಮಣರೆಂದೂ, ತಮಗೆ ಮಾತ್ರ ವೇದಗಳ ಅರ್ಥ ತಿಳಿದಿದೆಯೆಂದೂ ಭಾವಿಸಿದ್ದರು. ತಮ್ಮ ದೈವ ಮಾಕಾಳಿಗೆ ಪ್ರಾಣಿಬಲಿಗಳನ್ನು ಕೊಡುತ್ತಿದ್ದರು. ತಮ್ಮ ಸಾಧನೆಯ ಅಂಗವಾಗಿ ಅವರು ಮಾಂಸವನ್ನು ತಿನ್ನುತ್ತಿದ್ದರು. ಮದ್ಯವನ್ನು ಕುಡಿಯುತ್ತಿದ್ದರು, ಸ್ತ್ರೀಯರೊಡನೆ ಕಾಮುಕ ಸಂಬಂಧವನ್ನು ಪಡೆಯುತ್ತಿದ್ದರು. ಅವರ ದೇವತೆ ಮಾಕಾಳಿಗೆ ಕೆಂಪು ಕಣ್ಣುಗಳು, ಉದ್ದನೆಯ ಕೋರೆದಾವಡೆಗಳು, ಕೊರಳಲ್ಲಿ ತಲೆಬುರುಡೆಗಳ ಹಾರ ಮತ್ತು ಅವಳ ಮೈಬಣ್ಣ ಅಚ್ಚಗಪ್ಪಾದರೂ ಧರಿಸಿದ ವಸ್ತ್ರಗಳ ಬಣ್ಣ ಮಾತ್ರ ಕೆಂಪು. ಈ ದೇವತೆಯನ್ನು ಅವಳ ಭಕ್ತರು ಮಂಗಳವಾರ ಮತ್ತು ಶುಕ್ರವಾರಗಳ ರಾತ್ರಿ ಕೆಂಪು ಹೂಗಳಿಂದ ಮಂತ್ರಗಳಿಂದ ಅರ್ಚಿಸುತ್ತಿದ್ದರು. ಇವರು ಕಾಮ ಸುಖವನ್ನು ಪಡೆಯುವಲ್ಲಿ ತಮ್ಮ ತಾಯಿ ತಂಗಿಯರು, ಮತ್ತು ಅನ್ಯಸ್ತ್ರೀಯರೆಂಬ ಭೇದವನ್ನಿಟ್ಟು ಕೊಂಡಿರಲಿಲ್ಲ. ಕುಡಿದು ಮತ್ತರಾದ ಇವರು ಇತರರು ಜೀಗುಪ್ಸೆ ಪಟ್ಟುಕೊಳ್ಳುವಂತೆ ಬೀದಿಗಳಲ್ಲಿ ಅಲೆಯುತ್ತಿದ್ದರು."[9]

"ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲೂಕಿನ ಸಾತೇನಹಳ್ಳಿ ಗ್ರಾಮದ ಶಾಸನದಲ್ಲಿ ಕೌಳರ ಬಗ್ಗೆ ಉಲ್ಲೇಖವಿದೆ. 'ಕೃಷ್ಣ ವಿಕ್ರೆರ್ಷ್ವದುಷ್ಟ ಚರಿತ(ರ್) ಕಾಳೇಯದುರ್ಂಮಾರ್ಗನವರು' ಎಂಬ ಶಿವಳ್ಳಿ ತಾಮ್ರ ಶಾಸನಗಳನ್ನು ಉಲ್ಲೇಖಿಸಿ ಇಲ್ಲಿ ನಿಂದೆಗೊಳಗಾಗಿರುವ 'ಕಾಳೇಯರು' ಕೌಳರೇ ಆಗಿದ್ದಾರೆ. ಈ ಶಾಸನದ ಊರು ಹಾಗೂ ಪಕ್ಕದ ಕೋಣವತ್ತಿಗಳು ಕೌಳರ ವಾಸಸ್ಥಾನಗಳಾಗಿರಬೇಕು. ಕೋಣವತ್ತಿ 'ಕೌಳಂಗೇರಿ' ಸಾತೇನಹಳ್ಳಿ 'ಕೌಳಗಡ್ಡೆ' ಎಂದು ಪ್ರಾಚೀನ ಹೆಸರುಗಳಿವೆ."[10]

"ಹಿರೇಕೆರೂರು ತಾಲೂಕಿನ ಬಳಗೆರೆಯಲ್ಲಿನ ಕೆರೆಯ ಮೂಲ ಹೆಸರು ಬಳರಿಯಕೆರೆ. ಇದು ಸ್ತ್ರೀದೇವತೆಯ ಹೆಸರಾಗಿದ್ದು, ಈ ದೇವತೆಯ ಆರಾಧಕರು ಕೌಳರಾಗಿದ್ದಾರೆ. ಇವರು ಕ್ರಿ.ಶ. 9ರಿಂದ 12ನೆಯ ಶತಮಾನದ ಅವಧಿಯಲ್ಲಿ ಅಧಿಪತ್ಯ ನಡೆಸಿದವರು ಈ ಜನಾಂಗದ ವಿಶೇಷತೆ ಜೋಗಿ ವೇಷಧಾರಿಗಳಾಗದ ಇವರು ಚಿನ್ನಮುಳುಗುಂದ ಗುಡ್ಡದ ಪೂರ್ವದಿಕ್ಕಿಗೆ ವಿಶಾಲವಾದ ಪ್ರದೇಶದಲ್ಲಿ ನೆಲೆಸಿದ್ದರು. ಇವರು ಯೋನಿಭಾಗವನನ್ನು ವೈಶಿಷ್ಟ್ಯಪೂರ್ಣವಾಗಿ ಪೂಜಿಸಿ ಆರಾಧಿಸುವ ಪರಿಪಾಠವಿದ್ದು, ನರಬಲಿ, ಪಶುಬಲಿ ಆಚರಣೆಯು ಇವರಲ್ಲಿ ಕಂಡುಬರುತ್ತದೆ. ಈ ಗುಡ್ಡಕ್ಕೆ ಜೋಗಿಗುಡ್ಡವೆಂದು ಕರೆಯುತ್ತಾರೆ. ಈ ಕೆರೆಯ ಏರಿಯ ಮೇಲೆ 'ಬಳರಿ' ದೇವಿಯ ವಿಗ್ರಹವನ್ನು ಸ್ಥಾಪಿಸಿ ಪೂಜಿಸುತ್ತಿದ್ದರು."[11]

ಈ ಭಾಗದಲ್ಲಿ ಕಂಡುಬರುವ ಚಕ್ಕೇರೂರಿನ ಬಳರಿದೇವತೆ, ಬಾರಂಗಿಯ ಬಳರಿದೇವತೆ ಇವು ಶಕ್ತಿ ದೇವತೆಯ ಅರ್ಚನೆಗೆ ಪ್ರಸಿದ್ಧ ಕೇಂದ್ರಗಳಾಗಿದ್ದವು. ಕೌಳರು ಇಂಥ ದೇವಸ್ಥಾನಗಳಲ್ಲಿ ವಾಸವಾಗಿದ್ದ ಶಕ್ಯತೆ ಇದೆ. ಬಳರಿ ದೇವತೆಯನ್ನು ಬನದಲ್ಲಿ ಸ್ಥಾಪಿಸಿರಬೇಕು. ಇದು ಕೌಳರ ದೇವತೆಯೆಂದು ಕಲಬುರ್ಗಿಯವರು ಹೇಳಿದ್ದಾರೆ. "ಬಳರಿ ವಿಗ್ರಹದ ಪ್ರಮುಖವಾದ ಸಂಕೇತವೆಂದರೆ, ಪಾದದ ಬಳಿ ಗೂಗೆ ಪಾದಪೀಠದಲ್ಲಿ ಬಳರಿಯಿಂದ ತುಳಿತಕ್ಕೊಳಗಾದ ಮಾನವ, ಅವನ ಪಾದಗಳತ್ತ ತೋಳ, ತಲೆಯತ್ತ ನಾಯಿಗಳು ಅವನನ್ನು ತಿನ್ನುವ ಭಂಗಿಯಲ್ಲಿರುವುದು ಕಂಡುಬರುತ್ತದೆ. ಈ ಸಂಕೇತಗಳನ್ನು ಗಮನಿಸಿದರೆ ಇದು ಕೌಳರ ದೇವತೆ ಎಂದು ಹೇಳಬಹುದು. ಇದು ವಾಮಚಾರಿಗಳ ಪಂಥವಾಗಿರಬೇಕು ಎಂದು ಹೇಳಿದ್ದಾರೆ."[12]

"ಅರಸೀಕೆರೆ ತಾಲೂಕಿನ ನೀರ್ಗುಂನಡಿನ ಯಲೆಗುಂದದ ಕ್ರಿ.ಶ. 1136ನೆಯ ಶಾಸನದಲ್ಲಿ ವಿಷ್ಣುವರ್ಧನನ ರಾಣಿ ಚಿಕ್ಕಶಾಂತಲೆಯು ಇಲ್ಲಿ ರಾಮದೇವರ ಹಳ್ಳದ ಚಂಡಿಮುಂಡಿಯ ತೀರ್ಥದ ದೇವಿಯ ಆರಾಧಕಳಾಗಿದ್ದಳು."[13] ಇಂದಿಗೂ ಈ ಕಾಡಿನ ಭಾಗದ ಏಕಾಂತ ಸ್ಥಳದಲ್ಲಿರುವ ಪುರದಮ್ಮ ಎಂಬ ದೇವಿಯು ನೆಲೆಸಿದ್ದಾಳೆ. ಸೋಮವಾರವೊಂದನ್ನು ಬಿಟ್ಟು ಇಲ್ಲಿ ನಿತ್ಯ ರಕ್ತಮಾಂಸ ಮದ್ಯಗಳಿಂದ ಪೂಜೆಯು ನಡೆಯುತ್ತದೆ. ಈ ನೆಲೆಯು ಹಿಂದೆ ತಾಂತ್ರಿಕ ಶಾಕ್ತ ನೆಲೆಯಾಗಿತ್ತೆಂದು ಹೇಳಬಹುದು. ಈ ಗ್ರಾಮದ ದೇವಿಗೆ ಉಗ್ರರೂಪದ ಬಲಿ ಆಚರಣೆಗಳು ನಡೆಯುತ್ತವೆ. ಮಧ್ಯರಾತ್ರಿಯಲ್ಲಿ ನಡೆಯುವ ಈ ಆಚರಣೆಯು ಬಹುಶ ಹಿಂದೆ ಈ ಪ್ರದೇಶವು ತಾಂತ್ರಿಕ ಪಂಥಗಳ ಪಳೆಯುಳಿಕೆಗಳೇ ಆಗಿರಬಹುದು.

ಕೌಳರು ಭೋಗವಸ್ತುಗಳ ಮಧ್ಯೆ ಇದ್ದರೂ ಅಸಾಧಾರಣ ಸಂಯಮಿಗಳಾಗಿದ್ದರೆಂದು ಕಾಣುತ್ತದೆ. ಶಾಸ್ತ್ರಜ್ಞಾನ, ಸಂಯಮ, ಶುದ್ಧ ಹೃದಯ ಉಳ್ಳವನು ಕೌಲ ಮಾರ್ಗಕ್ಕೆ ಬರಲರ್ಹನಾಗುತ್ತಾನೆ. 'ಕೌಲ' ಮತದ ಮಾರ್ಗವೇನೇ ಇರಲಿ ಉದ್ದೇಶವು ಮಾತ್ರ ಮಹೋನ್ನತವಾದುದೆಂಬುದನ್ನು ನಾವು ಮರೆಯುವಂತಿಲ್ಲ ಎಂದು ಎಂ. ಚಿದಾನಂದಮೂರ್ತಿಯವರು ಹೇಳಿದ್ದಾರೆ. ಒಟ್ಟಾರೆಯಾಗಿ ಹೇಳುವುದಾದರೆ ಶೈವದ ಶಾಖೆಯಲ್ಲಿ ಕೌಳ ಪಂಥವು ಒಂದಾಗಿದೆ. ಕೌಳರು ಶಾಕ್ತಿಯ ಆರಾಧಕರಾಗಿ ಕಾಳಿಯನ್ನು ಪೂಜಿಸುತ್ತಿದ್ದರು. ಇವರಲ್ಲಿ ವಾಮಚಾರ ಪದ್ಧತಿ ರೂಢಿಯಲ್ಲಿತ್ತು.

**ಕೊನೆ ಟಿಪ್ಪಣಿಗಳು**


1. ಚಿದಾನಂದಮೂರ್ತಿ, ಎಂ. (2017). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್ ಹೌಸ್. ಪುಟ. 169.
2. ವೆಂಕಟಾಚಲಶಾಸ್ತ್ರಿ ಟಿ.ವಿ., ರಾಘವೇಂದ್ರರಾವ್ ಕೆ. (ಸಂ.). (2009). *ಬ್ರಹ್ಮಶಿವ ವೃತ್ತವಿಲಾಸ ಸಂಪುಟ: ಸಮಯ ಪರೀಕ್ಷೆ, ಧರ್ಮ ಪರೀಕ್ಷೆ. ಸಮಯ ಪರೀಕ್ಷೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪುಟ. 71.

3. ಮಂಜುನಾಥ, ಸಿ.ಯು. (2012). *ಶಾಸನಗಳು ಮತ್ತು ಕರ್ಣಾಟಕ ಸಂಸ್ಕೃತಿ.* ಚಿತ್ಕಲಾ ಪ್ರಕಾಶನ. ಪುಟ. 141.
4. ಅದೇ. ಪುಟ. 140.
5. ಜ್ಞಾನಾನಂದ, ಜಿ. (2019). *ಅರ್ಧನಾರೀಶ್ವರ ಸಂಪ್ರದಾಯ ಶಿಲ್ಪ.* ಸಂಕೃತಿ ಸಾಹಿತ್ಯ ಪ್ರತಿಷ್ಠಾನ. ಪುಟ. 217.
6. ಚಿದಾನಂದಮೂರ್ತಿ, ಎಂ. (2013). *ಮಧ್ಯಕಾಲೀನ ಕರ್ನಾಟಕದ ಕೆಲವು ರಹಸ್ಯ ತಾಂತ್ರಿಕ ಪಂಥಗಳು.* **ಈ ಗ್ರಂಥದಲ್ಲಿ:** ಹರೀಶ್, ಜಿ.ಬಿ. (ಸಂ.). *ತಂತ್ರ ದರ್ಶನ.* ಅಂಕಿತ ಪುಸ್ತಕ. ಪುಟ. 73.
7. ಮಂಜುನಾಥ, ಸಿ.ಯು. (2012). ಪೂರ್ವೋಕ್ತ. ಪುಟ. 141.
8. ಎ.ಐ. ಸಂ. 33, ಹಿರೇಕೆರೂರು. ಪುಟ. 131, 133.
9. ಹರೀಶ್, ಜಿ.ಬಿ. (2013). ಪೂರ್ವೋಕ್ತ. ಪುಟ–73.
10. ಬೋಜರಾಜ ಬ ಪಾಟೀಲ. (1995). *ನಾಗರಖಂಡ–70 : ಒಂದು ಅಧ್ಯಯನ.* ಸುವ್ವಿ ಪಬ್ಲಿಕೇಷನ್. ಪುಟ. 238.
11. ಕಮ್ಮರ ಲಿಂಗರಾಜ. (2017). *ಉದಕದೊಳಗಣ ಪಾವಕ.* ಹಳ್ಳೂರು ಪ್ರಕಾಶನ. ಪುಟ. 71.
12. ಬೋಜರಾಜ ಬ ಪಾಟೀಲ. (1995). ಪೂರ್ವೋಕ್ತ. ಪುಟ. 238.
13. ಎಪಿಗ್ರಾಫಿಯ ಕರ್ನಾಟಿಕಾ ಸಂಪಟ–8: ಅರಸೀಕರೆ, ಶಾಸನ ಸಂಖ್ಯೆ 67 ಕ್ರಿ.ಶ. 1136.